ಶ್ರೀ ವಿ. ಮುನಿಯಪ್ಪ (ರೇಷ್ಮೆ ಖಾತೆಯ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರ ಪರವಾಗಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಬೆಂಗಳೂರು ನಗರ ಪಾಲಿಕೆಯು ನಿರ್ವಹಿಸುತ್ತಿರುವ ಶ್ರೀರಾಮಪುರದ ವಿದ್ಯುತ್ ಚಿತಾಗಾರದಲ್ಲಿ ಚಿತಾಗಾರದ ಚಿಮಣಿಯಿಂದ ಹೊರಡುವ ಹೊಗೆಯು ತುಂಬಾ ಕೆಟ್ಟ ವಾಸನೆಯಿಂದ ಕೂಡಿರುವುದರ ಬಗ್ಗೆ ಸಾರ್ವಜನಿಕರ ದೂರುಗಳು ಬಂದಿರುತ್ತವೆ. ಕೆಟ್ಟ ವಾಸನೆಯನ್ನು ತಪ್ಪಿಸುವ ದೃಷ್ಟಿಯಿಂದ ಸದರಿ ಚಿಮಣಿಯನ್ನು 20 ಅಡಿಗಳಿಂದ 30 ಅಡಿ ಎತ್ತರಕ್ಕೆ ಎತ್ತರಿಸಲಾಗಿರುತ್ತದೆ. ಅಲ್ಲದೆ ಆ ಚಿಮಣಿಯನ್ನು ತಯಾರು ಮಾಡಿರುವ ಕಂಪನಿಯವರ ಅಭಿಪ್ರಾಯದಂತೆ ಅದನ್ನು 30ಅಡಿಗಳಿಗೆ ಮೇಲ್ಪಟ್ಟು ಎತ್ತರಿಸಲಾಗುವುದಿಲ್ಲ.

ಆದ್ದರಿಂದ ವೈಜ್ಞಾನಿಕ ರೀತಿಯಿಂದ ಈಗ ಹೊರಬರುತ್ತಿರುವ ಹೊಗೆ ಮತ್ತು ವಾಸನೆಯನ್ನು ತಪ್ಪಿಸಿ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ಹೋಗಲಾಡಿಸಲು ಬೆಂಗಳೂರು ಮಹಾನಗರ ಪಾಲಿಕೆಯು ಮೇ ಡೆಕ್ಕನ್ ಇಂಜಿನಿಯರಿಂಗ್ ಕನ್ಸಲ್ಟೆನ್ಸಿ ಸರ್ವೀಸ್‌ರವರನ್ನು ಸಂಪರ್ಕಿಸಿ ಶೀಘ್ರದಲ್ಲಿಯೇ ಮೇಲಿನ ನ್ಯೂನತೆಯನ್ನು ಸರಿಪಡಿಸಲು ವಿಚಾರ ವಿನಿಮಯ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

(6) ಕೊಳ್ಳೇಗಾಲ ತಾಲ್ಲೂಕು ಬಸ್ತಿಪುರ ಗ್ರಾಮದಲ್ಲಿರುವ ದುರ್ಬಲರಿಗೆ ನಿವೇಶನ ಹಂಚಲು ಭೂಸ್ವಾಧೀನ.

ಶ್ರೀ ಜಿ. ರಾಜುಗೌಡ: ಮೈಸೂರು ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಬಸ್ತೀಪುರ ಗ್ರಾಮದಲ್ಲಿ 162 ಮಂದಿ ದುರ್ಬಲ ವರ್ಗದವರಿಗೆ ನಿವೇಶನ ಒದಗಿಸಲು ಬಸ್ತೀಪುರ ಸರ್ವೆ ನಂ.11ಎ.ರಲ್ಲಿ 0.88, ಸರ್ವೆ ನಂ. 11ಸಿ.ಯಲ್ಲಿ 1.4 ಮತ್ತು 112.3 ರಲ್ಲಿ 1.34 ಭೂಸ್ವಾಧೀನ ಪ್ರಸ್ತಾವನೆ ನಡೆದಿದ್ದರೂ ಸಹ 1984-85ರಲ್ಲಿ ಅನ್ಯಕ್ರಾಂತ ಮಾಡಿರುತ್ತಾರೆ.

ಮಾಡಿದ್ದಾಗ್ಯೂ ಸಹ ಜಿಲ್ಲಾಧಿಕಾರಿಗಳು ಅಂತಿಮ ಅಧಿಸೂಚನೆಯನ್ನು ಹೊರಡಿಸಿ ಮೇಲ್ಕಂಡ ಭೂಮಿಗಳನ್ನು ಸ್ವಾಧೀನಪಡಿಸಿಕೊಳ್ಳಲು ಕ್ರಮ ಕೈಗೊಂಡಾಗ ಭೂಮಾಲೀಕರು ರಾಜ್ಯದ ಮುಖ್ಯ ನ್ಯಾಯಾಲಯ ಅಂತಿಮ ಅಧಿಸೂಚನೆಯನ್ನು ರದ್ದುಪಡಿಸುರುವುದು ಮುಖ್ಯ ನ್ಯಾಯಾಲಯದ ನ್ಯಾಯಮೂರ್ತಿಗಳು ಅಂತಿಮ ಅಧಿಸೂಚನೆಯನ್ನು ರದ್ದುಪಡಿಸುವಾಗ ಭೂಮಾಲೀಕರಿಗೆ ಅವರ ಅಹವಾಲನ್ನು ಸಲ್ಲಿಸಲು ಸಾಕಷ್ಟು ಕಾಲಾವಕಾಶ ಕೊಡದಿರುವ ಪ್ರಯುಕ್ತ ಅವರ ಗೈರು ಹಾಜರಿಯಲ್ಲಿ ತೀರ್ಮಾನ ಕೈಗೊಂಡಿರುವುದರಿಂದ ಇದು ಕಾನೂನಿಗೆ ವಿರೋಧವಾಗಿರುವುದರಿಂದ ಈ ಅಂತಿಮ ಅಧಿಸೂಚನೆಯನ್ನು ರದ್ದುಪಡಿಸಿರುತ್ತಾರೆ ಮತ್ತು ಭೂಸ್ವಾಧೀನಾಧಿಕಾರಿಗಳಿಗೆ 3(2)ಹಂತದಿಂದ ಮತ್ತೆ ಭೂಸ್ವಾಧೀನ ಕೈಗೆತ್ತಿಕೊಳ್ಳಬೇಕೆಂದು ಆದೇಶ ಕೊಟ್ಟಿದ್ದರು. ಆ ಆದೇಶವನ್ನು ಉಲ್ಲಂಘಿಸಿ ಮಾನ್ಯ ಉಪ ವಿಭಾಗಾಧಿಕಾರಿಗಳು (ನಿವೇಶನ) ಮೈಸೂರುರವರು ಭೂಮಾಲೀಕರ ವಶೀಲ ಬಾಜಿಗೆ ಒಳಗಾಗಿ ಅಧಿಸೂಚನೆಯನ್ನು ಮೊದಲಿನ ಹಂತದಿಂದಲೇ ರದ್ದುಗೊಳಿಸಿ ಈ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳ ಒಪ್ಪಿಗೆ ಪಡೆದಿರುತ್ತಾರೆ.

80-81ರಲ್ಲಿ ಮೇಲ್ಕಂಡ ಭೂಸ್ವಾಧೀನ ಪ್ರಕರಣ ನಡೆದಿದ್ದರೂ ಅಂದಿನ ತಹಶೀಲ್ದಾರರವರು ಆ ಭೂಮಿಯನ್ನು ಅನ್ಯ ಕ್ರಾಂತ್ ಮಾಡಿರುವುದು ಕಾನೂನು ಬಾಹಿರ. ಎರಡನೆಯದಾಗಿ ಅಂದಿನಮಾನ್ಯ ಉಪ ವಿಭಾಗಾಧಿಕಾರಿಗಳು ಮುಖ್ಯ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಭೂಸ್ವಾಧೀನ ಪ್ರಕರಣವನ್ನು ಅಂತ್ಯಗೊಳಿಸುವುದು ಕಾನೂನು ಬಾಹಿರ. ತಾವು ಮೈಸೂರು ಜಿಲ್ಲಾಧಿಕಾರಿಗಳಿಗೆ ಪ್ರಕರಣವನ್ನು ಮುಂದುವರೆಸುವಂತೆ ಆದೇಶ ಕೊಡಬೇಕೆಂದು ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ರಾಜುಗೌಡರು ಎತ್ತಿದಂತಹ ಸಮಸ್ಯೆಯನ್ನು ಮಾನ್ಯ ಕಂದಾಯ ಮಂತ್ರಿಗಳ ಗಮನಕ್ಕೆ ತಂದು ಆ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಲಾಗುವುದು.

(7) ನ್ಯಾಯಾಂಗ ಕಸ್ಟಡಿಯಲ್ಲಿರುವ ಖೈದಿಗಳ ವಿಲಾಸಿ ಜೀವನಕ್ಕೆ ಕಾರಣರಾದವರ ಮೇಲೆ ಕಠಿಣ ಕ್ರಮ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್: ಮಾನ್ಯ ಉಪಾಧ್ಯಕ್ಷಿಣಿಯವರೆ, ನ್ಯಾಯಾಂಗ ಕಸ್ಟಡಿಯಲ್ಲಿದ್ದ ನಗರದ ಇಬ್ಬರು ಕುಖ್ಯಾತ ರೌಡಿಗಳಾದ ಶ್ರೀರಾಂಪುರ ಕಿಟ್ಟಿ ಅಲಿಯಾಸ್ ಕೃಷ್ಣೋಜಿರಾವ್ ಮತ್ತು ಆತನ ಜೊತೆಗಾರ ಕರಿಯ ಅಲಿಯಾಸ್ ರೇಣುಕಾರಾಧ್ಯ ಅವರುಗಳು ರೋಗಿಗಳ ಸೋಗಿನಲ್ಲಿ ನಗರದ ವಿಕ್ಟೋರಿಯಾ ಆಸ್ಪತ್ರೆಯ ಖೈದಿಗಳ ವಾರ್ಡಿನಲ್ಲಿ ಸೇರಿ ಅಲ್ಲಿ ವಿ.ಸಿ.ಆರ್., ಟಿ.ವಿ., ಬ್ಲೂ ಫಿಲಂ, ನೋಡುತ್ತಾ ಮದ್ಯ ಮಾಂಸಗಳನ್ನಿಟು ಕೊಂಡು ವಿಲಾಸಿ ಜೀವನ ನಡೆಸುತ್ತಿದ್ದುದನ್ನು ಪತ್ತೆ ಹಚ್ಚಿ ಮತ್ತೆ ಅವರನ್ನು ನ್ಯಾಯಾಂಗ ಕಸ್ಟಡಿಗೆ ಒಪ್ಪಿಸಿರುವುದಾಗಿ ತಿಳಿದುಬಂದಿದೆ. ವಿಕ್ಟೋರಿಯಾ ಆಸ್ಪತ್ರೆಯ ಖೈದಿಗಳಿಗೆ ದೊರಕಿದ ಬಗೆ ಹೇಗೆ? ಇದರ ಹಿಂದೆ ಯಾವ ವೈದ್ಯರ ಹಾಗೂ ಪೋಲೀಸ್ ಅಧಿಕಾರಿಗಳು ಕೈವಾಡ ಇದೆ ಎಂಬ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೆಂದು ಹಾಗೂ ಈ ಬಗ್ಗೆ ಸದನಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ನೀಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಸಚಿವರು): ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಗೃಹ ಮಂತ್ರಿಗಳ ಪರವಾಗಿ ಉತ್ತರ ಹೇಳಲು ತಮ್ಮ ಅನುಮತಿ ಬಯಸಿ ಈ ಹೇಳಿಕೆಯನ್ನು ಮಾಡುತ್ತಿದ್ದೇನೆ.

ಡೆಪ್ಯುಟಿ ಪೊಲೀಸ್ ಕಮೀಷನರ್, ಕಾನೂನು ಮತ್ತು ಸುವ್ಯವಸ್ಥೆ (ಪೂರ್ವ) ಬೆಂಗಳೂರುರವರು ತಮ್ಮ ಸಹ ಅಧಿಕಾರಿಗಳೊಂದಿಗೆ ದಿನಾಂಕ 16:17-03-1991ರ ರಾತ್ರಿಯಲ್ಲಿ ಇಬ್ಬರು ರೌಡಿಗಳಾದ ಕಿಟ್ಟಿ ಅಲಿಯಾಸ್ ಕೃಷ್ಣೋಜಿರಾವ್ ಮತ್ತು ಕರಿಯ ಅಲಿಯಾಸ್ ರೇಣುಕಾರಾಧ್ಯರವರು ದಾಖಲಾಗಿದ್ದ ವಿಕ್ಟೋರಿಯಾ ಆಸ್ಪತ್ರೆಯ ವಾರ್ಡ್ ಮೇಲೆ ದಿಡೀರ್ ತಪಾಸಣೆ ನಡೆಸಿರುತ್ತಾರೆ. ಈ ಇಬ್ಬರು ರೌಡಿಗಳು ಮೂರು ಡ್ಯಾಗರ್ಸ್ ಖಾಲಿ ಮದ್ಯದ ಸೀಸೆಗಳು, ಟಿ.ವಿ., ವಿ.ಸಿ.ಆರ್. ಮತ್ತು ಎರಡು ಬ್ಲೂ ಫಿಲಂ ಕ್ಯಾಸೆಟ್‌ಗಳನ್ನು ಹೊಂದಿದ್ದುದು ಬೆಳಕಿಗೆ ಬಂದಿರುತ್ತದೆ.

ಈ ರೌಡಿಗಳು ಡ್ಯಾಗರ್ಸ್, ಖಾಲಿ ಮದ್ಯದ ಸೀಸೆಗಳು, ಟಿ.ವಿ., ವಿ.ಸಿ.ಆರ್, ಮತ್ತು ಬ್ಲೂ ಫಿಲಂ ಕ್ಯಾಸೆಟ್‌ಗಳನ್ನು ಹೊಂದಿದ್ದರು ಅನೇಕ ಅಪರಾಧಗಳಿನ್ನಿಸುದುದರಿಂದ ಇವರುಗಳ ಮೇಲೆ ಈ ಕೆಳಕಂಡ ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ.

1. ಪ್ರಕರಣ ಸಂಖ್ಯೆ 20:91 ಕಲಂ 353,506 ಐಪಿಸಿ ರಡಿ ಭಯ ಹುಟ್ಟಿಸುವ ಮತ್ತು ಪೊಲೀಸ್ ಅಧಿಕಾರಿಗಳು ತಮ್ಮ ಕಾನೂನುಬದ್ಧವಾದ ಕಾರ್ಯ ನಿರ್ವಹಿಸುವಲ್ಲಿ ತಡೆಯುಂಟು ಮಾಡಿದ್ದಕ್ಕೆ ಈ ಗುಹ್ಯೆಯನ್ನು ದಾಖಲು ಮಾಡಿಕೊಳ್ಳಲಾಗಿದೆ.
2. ಪ್ರಕರಣ ಸಂಖ್ಯೆ 21:91 ಐಪಿಸಿ ಕಲಂ 294 ಅನ್ನು ಬ್ಲೂ ಫಿಲಂ ಕ್ಯಾಸೆಟುಗಳನ್ನು ಹೊಂದಿದ್ದಕ್ಕಾಗಿ ದಾಖಲು ಮಾಡಿಕೊಳ್ಳಲಾಗಿದೆ.
3. ಪ್ರಕರಣ ಸಂಖ್ಯೆ 23:91 ಐಪಿಸಿ ಕಲಂ 117,215,384,606,511, ಓದಿದೆ 34 ಐಪಿಸಿ ರೆಡಿ-ಈ ಪ್ರಕರಣವು ಪ್ರಮುಖವಾಗಿದ್ದು ಈ ರೌಡಿಗಳು ಅನೇಕ ದಾಖಲು ಪತ್ರಗಳನ್ನು ಸ್ಟ್ಯಾಂಪ್ ಹಚ್ಚಿದ ರಸೀದಿಗಳನ್ನು ಮತ್ತು ಆನ್ ಡಿಮ್ಯಾಂಡ್ಸ್‌ಗಳನ್ನು ಹೊಂದಿದ್ದಕ್ಕಾಗಿ ದಾಖಲಿಸಿಕೊಳ್ಳಲಾಗಿದೆ. ಈ ದಾಖಲೆಗಳನ್ನು